**File No.DTE-CDC0CDC/11/2020-JD CDC-DEPT TECH EDUCATION**

ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಡಿಟಿಇ/10/ಸಿಸಿಟಿಕ್/2017-18

ಆಯುಕ್ತರ ಕಛೇರಿ

ತಾಂತ್ರಿಕ ಶಿಕ್ಷಣ ಭವನ, ಅರಮನೆ ರಸ್ತೆ

ಬೆಂಗಳೂರು-560001, ದಿ:12-08-2020

-: ಸುತ್ತೋಲೆ :-

ವಿಷಯ: ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕದ ವತಿಯಿಂದ ಆಯೋಜಿಸುವ ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳಿಗೆ ಪ್ರಸ್ತಾವನೆ ಸಲ್ಲಿಸುವ ಕುರಿತು.

*****

ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೆ ಒಳಪಡುವ ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸಿಸಿಟೆಕ್ ಉಪಘಟಕದ ವತಿಯಿಂದ ಆಯೋಜಿಸುವ ಅಲ್ಪಾವಧಿ ತರಬೇತಿಗಳು, ವೃತ್ತಿ ಶಿಕ್ಷಣ ತರಬೇತಿಗಳು ಮತ್ತು ಇತರ ಅಗತ್ಯ ಕಾರ್ಯ ಚಟುವಟಿಕೆಗಳನ್ನು ನಡೆಸುತ್ತಿರುವುದರ ಬಗ್ಗೆ ಅಗತ್ಯ ಮಾಹಿತಿಯ ದಾಖಲೆಗಳ ಪ್ರಸ್ತಾವನೆಗಳನ್ನು ಇ-ಕಛೇರಿ ಮುಖಾಂತರ ಕಾರ್ಯ ನಿರ್ವಹಿಸುತ್ತಿರುವುದರಿಂದ ತಮ್ಮ ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ಕನಿಷ್ಠ 20 ದಿನಗಳ ಮುಂಚಿತವಾಗಿ ಆಯುಕ್ತರ ಕಛೇರಿಗೆ ತಲುಪುವಂತೆ ಸೂಕ್ತ ಕ್ರಮವಹಿಸಿ, ಇಲಾಖೆ ಅನುಮೋದನೆ ಪಡೆಯುವಂತೆ ಸಂಸ್ಥೆಯ ಪ್ರಾಚಾರ್ಯರುಗಳಿಗೆ ಈ ಮೂಲಕ ಸೂಚಿಸಲಾಗಿದೆ.

ಮುಂದುವರೆದು, ಅಲ್ಪಾವಧಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಬಂಧ ಸಲ್ಲಿಸುವ ಪ್ರಸ್ತಾವನೆಯೊಂದಿಗೆ ಸದರಿ ತರಬೇತಿಗೆ ಸಂಬಂಧಿಸಿದ ವಿವರಗಳನ್ನೊಳಗೊಂಡ ಅರ್ಜಿ ನಮೂನೆ, ದಿನಾಂಕವನ್ನೊಳಗೊಂಡ ವೇಳಾಪಟ್ಟಿ, ಕೋರ್ಸಿನ ವಿಷಯ ಪರಿವಿಡಿ, ಸಂಪನ್ಮೂಲ ವ್ಯಕ್ತಿಗಳ ವ್ಯಯಕ್ತಿಕ ಮಾಹಿತಿ(ರೆಸ್ಯೂಂ), ಕರಪತ್ರ (Brochure) ಪ್ರತಿ, ಹಾಗೂ ಸರ್ಕಾರದ ಇತರೆ ಯೋಜನೆಗಳಿಂದ ತರಬೇತಿಗೆ ನಿಯುಕ್ತಿಗೊಂಡ ಅಭ್ಯರ್ಥಿಗಳ ಆದೇಶ ಪ್ರತಿ, ಇತ್ಯಾದಿ ವಿವರಗಳ ಮಾಹಿತಿಗಳನ್ನು ಕಡ್ಡಾಯವಾಗಿ ಕನ್ನಡದಲ್ಲೇ ಸಲ್ಲಿಸುವಂತೆ ಸಹ ಸೂಚಿಸಲಾಗಿದೆ ಹಾಗೂ ಮೇಲ್ಕಂಡ ಎಲ್ಲಾ ವಿವರಗಳ ಮಾಹಿತಿಯ ದಾಖಲೆಗಳನ್ನು ಲಗತ್ತಿಸದೆ ಕಳುಹಿಸುವ ಪ್ರಸ್ತಾವನೆಗಳನ್ನು ಪರಿಗಣಿಸಲಾಗುವುದಿಲ್ಲ.

ಜಂಟಿ ನಿರ್ದೇಶಕರು

ಇವರಿಗೆ:- ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್ ಹಾಗೂ ಇಂಜಿನಿಯರಿಂಗ್ ಕಾಲೇಜುಗಳ ಪ್ರಾಚಾರ್ಯರುಗಳಿಗೆ ಮಾಹಿತಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ.

ಪ್ರತಿ:- ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿಟಿಇ ವೆಬ್ ಸೈಟ್ ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.